**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 17-03-2026**

**ಮುಖ್ಯ ವಿಚಾರಣೆ - ವಾದಿ ಪರ ವಕೀಲರಿಂದ** :

**1)** ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

2) ಈ ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

3) ನೋಂದಾಯಿತ ಕ್ರಯದ ಕರಾರು ಪತ್ರ ದಿನಾಂಕ 28-09-2015 ರ ಮೂಲ ದಾಖಲೆಯನ್ನು - ನಿ ಪಿ.1, ದಿನಾಂಕ 24-10-2019 ರ ನೋಟಿಸಿನ ಕಛೇರಿ ಪ್ರತಿ - ನಿ.ಪಿ.2, ಅಂಚೆ ರಸೀದಿಗಳನ್ನು - ನಿ.ಪಿ.3 ರಿಂದ 5, ಪ್ರತ್ಯುತ್ತರ ನೋಟಿಸ್ ದಿನಾಂಕ 6-11-2019 ನ್ನು - ನಿ.ಪಿ.6, ಅಂಚೆ ಲಕೋಟೆ - ನಿ.ಪಿ.6(ಎ), ದಿನಾಂಕ 08-04-2021 ರ ನೋಟಿಸಿನ ಕಚೇರಿ ಪ್ರತಿ - ನಿ.ಪಿ.7, 5 ಅಂಚೆ ರಸೀದಿಗಳನ್ನು - ನಿ.ಪಿ.8 ರಿಂದ 12, 4 ನೇ ಪ್ರತಿವಾದಿಗೆ ಜಾರಿಯಾಗದೇ ವಾಪಸ್ ಬಂದ ಅಂಚೆ ಲಕೋಟೆ - ನಿ.ಪಿ.13, ಸದರಿ ನೋಟಿಸನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿರುವ ನೋಟಿಸಿನ ಪ್ರತಿಯನ್ನು - ನಿ .ಪಿ.13(ಎ), 5 ಪೋಸ್ಟಲ್ ಟ್ರಾಕಿಂಗ್ ವರದಿಯ ಆನ್ಲೈನ್ ಪ್ರತಿಗಳನ್ನು - ನಿ.ಪಿ.14 ರಿಂದ 18, ಇನ್ನೊಂದು ಪ್ರತ್ಯುತ್ತರ ನೋಟಿಸ್ ದಿನಾಂಕ 27-04-2021 ನ್ನು - ನಿ.ಪಿ.19, ಅಂಚೆ ಲಕೋಟೆಯನ್ನು - ನಿ.ಪಿ.19(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ದಿನಾಂಕ 05-10-2020 ರ ಸಪ್ಲಿಮೆಂಟರಿ ಕರಾರು ಪತ್ರವನ್ನು ಗುರುತಿಸಲು ಕೋರಿದ್ದು, ಪ್ರತಿವಾದಿ ಪರ ವಕೀಲರು ಸೂಕ್ತ ಮುದ್ರಾಂಕ ಶುಲ್ಕ ಪಾವತಿಸಿಲ್ಲ ಎಂಬ ಕಾರಣಕ್ಕೆ ಸದರಿ ಕರಾರು ಪತ್ರದ ಬಗ್ಗೆ ತಕರಾರು ಮಾಡಿರುತ್ತಾರೆ. ಆದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಿ ಸದರಿ ದಾಖಲೆ ಮೇಲೆ ಪಾವತಿಸಿದ ಮುದ್ರಾಂಕ ಶುಲ್ಕ ಮತ್ತು ದಂಡದ ಬಗ್ಗೆ ಸುನಾವಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**